IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

# ಜಾನಪದ : ಚಾರಿತ್ರಿಕ ನಿಲುವು

**ಡಾ. ಸಣ್ಣಹನುಮಪ್ಪ ಜಿ.**
**ಸಹ ಪ್ರಾಧ್ಯಾಪಕರು ಕನ್ನಡ ವಿಭಾಗ**
**ಶ್ರೀಮತಿ ಇಂದಿರಾ ಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಾಗರ–577401**

**ಚರಿತ್ರೆಯ ಅರ್ಥ :** ಇಂಗ್ಲೀಷಿನ 'Hisotry' ಎಂಬ ಪದಕ್ಕೆ ಕನ್ನಡದಲ್ಲಿ ಇತಿಹಾಸ ಅಥವಾ ಚರಿತ್ರೆ ಎಂದು ಕರೆಯಲಾಗಿದೆ. ಈ ಎರಡೂ ಪದಗಳಿಗೂ ಸಾಮಾನ್ಯವಾಗಿ 'ಹಿಂದೆ ನಡೆದ ಘಟನೆ' 'ಗತಕಾಲಕ್ಕೆ ಸೇರಿದುದು' ಮತ್ತು ಪ್ರಾಚೀನ ಕಾಲದಲ್ಲಿ 'ಆಗಿಹೋದ ಸಂಗತಿಗಳು' ಎಂದು ಪರಿಭಾವಿಸಲಾಗಿದೆ.

ಅಂದರೆ ಪ್ರಾಚೀನ ಮಾನವನಿಂದ ಮೊದಲಾಗಿ ಇಂದುತನಕ ನಡೆದ ಘಟನೆಗಳ ಕ್ರಮಬದ್ಧ 'ದಾಖಲಿತ' ಕಥನವೇ ಇತಿಹಾಸ ಎಂಬಂತೆ ನಿರೂಪಿಸಲಾಗಿದೆ. ಯಾವುದೇ ಇತಿಹಾಸಕ್ಕೆ ಸಂಬಂಧಿಸಿದರೂ ಪುರಾವೆಗಳು ಇರಲೇಬೇಕು. ಅಂದರೆ ಲಿಖಿತ ಮತ್ತು ಸಂಬಂಧಿಸಿದ ಭೌತಿಕ ಆಕರ ಸಾಮಗ್ರಿಗಳೇ ಆಗಿರಬೇಕೆಂದೂ, ಸಮುದಾಯಗಳು ತಲೆಮಾರುಗಳಿಂದ ಹೊತ್ತು ತಂದ ನೆನಪುಗಳು, ಗಾದೆಗಳು, ಐತಿಹ್ಯಗಳು, ದಂತಕಥೆಗಳು, ಕಥೆ–ಗೀತೆಗಳಂಥ ಸಾಹಿತ್ಯ ಸಾಮಗ್ರಿಗಳು ನಂಬಲರ್ಹ ದಾಖಲೆಗಳಾಗಿ ಪರಿಗಣಿಸಬಾರದೆಂದು ತಾತ್ತ್ವಿಕರಿಸಿಕೊಂಡಿದೆ. ಹೀಗಾಗಿ ಇತಿಹಾಸದ ಕಾಲಕ್ರಮಗಳನ್ನು ಮತ್ತು ಅದರ ಸ್ವರೂಪ, ವಿನ್ಯಾಸಗಳನ್ನು ಪ್ರತಿಪಾದಿಸುವ ಗದ್ಯಶಾಸನಗಳು, ತಾಮ್ರಪಟಗಳು, ಶಿಲ್ಪಕಲೆಗಳು, ಆಯುಧಗಳು, ಲೋಹಗಳು, ಕಟ್ಟಡಗಳನ್ನು ಪ್ರಾಥಮಿಕ ಮೂಲಆಕರಗಳೆಂದು ಪರಿಗಣಿಸಬೇಕು. ಈ ಪ್ರಾಥಮಿಕ ಮೂಲ ಆಧಾರಗಳಿಂದಲೇ ಇತಿಹಾಸ ರಚನೆ ಮಾಡಬೇಕೆಂಬ ತಿಳಿವಳಿಕೆ ಪಶ್ಚಿಮದಲ್ಲಿ ಪ್ರಬಲವಾಗಿ ಬೆಳೆಯಿತು. ಆಗ ಆ ಇತಿಹಾಸ ಕಥನಕ್ಕೆ ತಾರ್ಕಿಕವೂ ಮತ್ತು ವೈಜ್ಞಾನಿಕ ಸ್ವರೂಪವೂ ಪ್ರಾಪ್ತವಾಗಿ ನಿರೂಪಿಸಲಾದ ಮಾಹಿತಿಗಳು ವಿಶ್ವಾಸರ್ಹವೆನಿಸುತ್ತವೆ ಎಂದು ನಂಬಲಾಯಿತು. ಈ ಬಗೆಯ ಆಲೋಚನೆಗಳಿಗೆ ಅಡಿಪಾಯ ಹಾಕಿ ಮುನ್ನೆಲೆಗೆ ತಂದು ಪರಂಪರೆಯನ್ನು ಬೆಳೆಸಿದವರೆಂದರೆ ಪ್ರಾಚೀನ ಗ್ರೀಕ್ ಮತ್ತು ರೋಮನ್ನರು.

ಹೀಗೆ ವಾಸ್ತವವಾದಿ ದೃಷ್ಟಿಯ ಇತಿಹಾಸ ರಚನಾ ಶಾಸ್ತ್ರದ ಸ್ವರೂಪವನ್ನು ಪಡೆದು ನಿರ್ವಚಿಸುವುದಕ್ಕೆ ತೊಡಗಿದ ಮೇಲೆ ವಿದ್ವಾಂಸರು ಇದನ್ನು ಒಂದು ವಿಶಿಷ್ಟ ಮಹತ್ವದ ಜ್ಞಾನಶಾಖೆಯಾಗಿ ಪರಿಭಾವಿಸಿ 'Historiography' ಎಂದೂ ಕರೆದಿದ್ದಾರೆ.


IJFANS International Journal of Food And Nutritional Sciences
Official Publication of International Association of Food and Nutrition Scientists

ಪಾಶ್ಚಿಮಾತ್ಯ ರಾಷ್ಟ್ರಗಳ ಜೀವನಕ್ರಮದಲ್ಲಿ ವಸ್ತು ಸಂಸ್ಕೃತಿಯೇ ಪ್ರಧಾನ. ಅದರ ಸಾಮಾಜಿಕ ರಚನೆಯಲ್ಲಿ ಬದುಕು ಮತ್ತು ಬಾಳ್ವೆಯಲ್ಲಿ ಭೌತಿಕ ಐಷಾರಾಮಿ ವಸ್ತುಗಳ ಕುತೂಹಲಗಳು ಹಾಸುಹೊಕ್ಕಾಗಿ ಬೆಸಿದುಕೊಂಡಿವೆ. ಹಾಗೆ ನೋಡಿದರೆ ಯುರೋಪಿನಲ್ಲಿ ನಡೆದ ಸತತವಾದ ಅಧ್ಯಯನ ಹಾಗೂ ಸಂಶೋಧನೆಗಳ ಸಾಧನೆಗಳಲ್ಲಿ ಆವಿಷ್ಕಾರಗೊಂಡ ಉತ್ಪಾದನೆಗಳಲ್ಲಿ ಸಿಂಹಪಾಲು ವಸ್ತುವಿಶೇಷಗಳೇ ಆಗಿವೆ. ಆದ್ದರಿಂದ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಜೀವನ ದೃಷ್ಟಿಯೂ ಕೂಡ Metirealistic ಆಗಿರುವುದನ್ನು ನಾವು ಪ್ರಮುಖವಾಗಿ ಗಮನಿಸಬೇಕು. ಹೀಗಾಗಿ ಏಕಾಕೃತಿಯ ಸಾಮಾಜಿಕ–ಸಾಂಸ್ಕೃತಿಕ ರಚನೆಯುಳ್ಳ ಯುರೋಪಿನ ಮಾನವನ ನಾಗರಿಕ ಇತಿಹಾಸ ಕಥನಗಳ ರಚನೆಯಲ್ಲಿ ಅದರ ಆಕರ–ಸಾಮಗ್ರಿಗಳಲ್ಲಿರುವ ಮಾಹಿತಿಗಳನ್ನವಲಂಬಿಸಿ ರುಜುವಾತು ಮಾಡುವ ಇತಿಹಾಸದ ಅಧ್ಯಯನ ಕ್ರಮ ನಮಗೆ ಅಚ್ಚರಿ ಹುಟ್ಟಿಸುವುದಿಲ್ಲ. ಮನುಷ್ಯನನ್ನು ನಂಬುವುದಕ್ಕಿಂತ ಆಕರ ಸಾಮಗ್ರಿಗಳಲ್ಲಿಯೇ ಪಶ್ಚಿಮದ ಇತಿಹಾಸ ರಚನಾ ದೃಷ್ಟಿಗೆ ನಂಬಿಕೆ ಜಾಸ್ತಿ. ವಸ್ತುನಿಷ್ಠತೆಯ (Objective) ಹೆಸರಿನಲ್ಲಿ ತನ್ನ ಸಾಮ್ರಾಜ್ಯಶಾಹಿ ಧೋರಣೆಗಳನ್ನು ಮುನ್ನೆಲೆಗೆ ತರುವ ಉದ್ದೇಶವೂ ಈ ಬಗೆಯ ಆಲೋಚನೆಯಲ್ಲಿ ಅಡಗಿರುತ್ತದೆ.

ಬದುಕಿನ ಪಾತಳಿಯಿಂದ ಹುಟ್ಟಿದ ತಿಳಿವಳಿಕೆ ಮತ್ತು ವಿಜ್ಞಾನ ಚಲನಶೀಲವಾಗಿರುತ್ತದೆ. ಪ್ರಕೃತಿ, ಜನಾಂಗ, ವೃತ್ತಿ, ಧರ್ಮಾಚರಣೆಗಳ ವೈವಿಧ್ಯತೆಯುಳ್ಳ ಸಮಾಜಕೇಂದ್ರಿತ ಜೀವನ ದೃಷ್ಟಿಗೆ ವರ್ತಮಾನದೊಂದಿಗಿನ ಸಂವಾದವೇ ಸಾಧ್ಯವಿಲ್ಲದ ಯಾವುದೇ ಸಮಾಜಗಳ ಚರಿತ್ರೆಯು ಒಂದು ಬಗೆಯ ಜಡ ವ್ಯವಸ್ಥೆಯನ್ನು ಕುರಿತ ಕನವರಿಕೆ ಮಾತ್ರವಾಗಿರುತ್ತದೆ. ಆದ್ದರಿಂದ ಬಹುಸಂಖ್ಯಾತ ಜನತೆಯ ಕುರಿತಲ್ಲದ ಯಾವುದೇ ಚರಿತ್ರೆಯ ನಿರೂಪಣೆಗಳು ಸಮಾಧಿ ಮೇಲೆ ನಿರ್ಮಾಣಗೊಂಡ ಅರಮನೆಗಳ ಅಧಿಕಾರಸ್ಥರ ಕಥೆಗಳಾಗಿರಲು ಮಾತ್ರ ಸಾಧ್ಯ.

ಈ ಹಿನ್ನೆಲೆಯಲ್ಲಿ ಅರಮನೆಯ ಅಧಿಕಾರಸ್ಥರ, ಆಳುವ ವರ್ಗಗಳ ಕುರಿತಾದ ಸಂಪತ್ತು... ಮುಂತಾದವುಗಳ ಯುದ್ಧ, ಸಂಗೀತ, ಚಿತ್ರಕಲೆ, ಸಾಹಿತ್ಯ, ಹೆಣ್ಣು ಮತ್ತು ಸಂಪತ್ತು ಈ ಬಗೆಗಿನ ಕಥೆಗಳು ಸಾಮಾನ್ಯ ಜನತೆಗೆ ರೋಚಕವೂ ಆಸಕ್ತಿದಾಯಕವೂ ಆಗಿ ಬೆರಗುಗೊಳಿಸುವುದು ವಿಚಿತ್ರವೆನಿಸಿದರೂ ಸತ್ಯವಾಗಿದೆ.

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 10, Iss 1, 2021

ಆದ್ದರಿಂದ ಪ್ರಭುತ್ವವು ತನ್ನನ್ನು ವೈಭವೀಕರಿಸಿಕೊಳ್ಳುತ್ತಾ ಆಳಿಸಿಕೊಳ್ಳುವ ಜನರಲ್ಲಿ ಶ್ರದ್ಧಾ ಭಕ್ತಿ ಮತ್ತು ಗೌರವಗಳನ್ನು ಮೂಡಿಸುತ್ತದೆ. ಈ ಭಾವನೆಗಳೇ ಪಾರಂಪರಿಕವಾಗಿ ಜನರ ಪ್ರಜ್ಞೆಯ ಭಾಗವಾಗಿ ನೆಲಸುವುದು ಸಾಮಾನ್ಯ ಬದುಕಿನ ಸಂಗತಿಯಾಗುತ್ತದೆ. ಇದುವೇ ಗತದ ಪ್ರಮಾಣೀಕೃತ ಚರಿತ್ರೆಯಾಗಿ ಜನಮಾನಸದಲ್ಲಿ ನಿಂತು ಬಿಡುವ ವಿದ್ಯಮಾನಗಳು ನಮ್ಮ ಮುಂದಿವೆ.

**ಚರಿತ್ರೆಯ ರಾಜಕಾರಣ ಮತ್ತು ಅಧಿಕಾರದ ನಿರೂಪಣೆ**

ಪಾರಂಪರಿಕ ಅರ್ಥದಲ್ಲಿ 'ಚರಿತ್ರೆ' ಎಂದರೆ ಅಧಿಕಾರಸ್ಥರ ಕಥನವೇ ಆಗಿದೆ. ಆಳರಸರ ಭವ್ಯ ವಂಶಾವಳಿಗಳ ಮತ್ತು ಅವರ ವರ್ಣರಂಜಿತ ಗತಬದುಕಿನ ವಿವರಗಳ ನಿರೂಪಣೆಗಳೇ ತುಂಬಿ ನಿಂತಿವೆ. ರಾಜ–ಮಹಾರಾಜರ ಅರಮನೆಯ ವೈಭವಗಳನ್ನು, ಯುದ್ಧದ ಸಂಭ್ರಮಗಳನ್ನು, ಸಂಪತ್ತನ್ನು ಲೂಟಿ ಹೊಡೆದುದನ್ನು, ಸೆರೆಹಿಡಿದು ತಂದ ಹೆಂಗಸರ ಕಥಾನಕಗಳನ್ನು, ವಿಜೃಂಭಣೆಯಿಂದ ವಿವರಿಸುವ ರಚನೆಗಳಾಗಿರುವುದು ಸ್ಪಷ್ಟ.

ಇಂಥ ರೋಚಕ ಇತಿಹಾಸ ರಚನಾಕಲೆ ಚಾರಿತ್ರಿಕವಾಗಿ, ಆಕಸ್ಮಿಕವಲ್ಲ. ಅದರ ಹಿಂದೆ ಸ್ವಹಿತಾಸಕ್ತಿ ಸಾಮ್ರಾಜ್ಯಶಾಹಿ ಧೋರಣೆಗಳು ನಿಸ್ಸಂಶಯವಾಗಿ ಕೆಲಸ ಮಾಡುತ್ತವೆ. ಚರಿತ್ರೆಯ ಕಥನಗಳನ್ನು ರೂಪಿಸುವಾಗ ದೊರೆತ ಚಾರಿತ್ರಿಕ ಆಕರ ಸಾಮಗ್ರಿಗಳಲ್ಲಿ ಆಯಾ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಬೆಳಕು ಚೆಲ್ಲುವ ಭಿನ್ನ ಸಂವೇದನೆಗಳನ್ನು ದಾಖಲಿಸದೇ ಇರುವುದು ಈ ಮಾತಿಗೆ ಪುಷ್ಟಿಯೊದಗಿಸಬಲ್ಲದು. ಜಗತ್ತಿನ ಪ್ರಾಚೀನ ನಾಗರಿಕತೆಗಳಾದ ಗ್ರೀಕ್, ರೋಮ್, ಬ್ಯಾಬಿಲೋನಿಯನ್ ಮತ್ತು ಸಿಂಧೂ ನಾಗರಿಕತೆಗಳನ್ನು ಕುರಿತ ಪಾರಂಪರಿಕ ಬರವಣಿಗೆಗಳನ್ನು ಗಮನಿಸಿದಾಗ ಚರಿತ್ರೆಯ ರಚನಾ ನಿರೂಪಣೆಯಲ್ಲಿನ ಉದ್ದೇಶಿತ ರಾಜಕಾರಣ ಅರಿವಿಗೆ ಬರಬಲ್ಲದು. ಶ್ರಮಿಕ ವರ್ಗಗಳ ಜೀವನ ವಿಧಾನಗಳು, ಅವರ ಸಂಪ್ರದಾಯ, ಆಚರಣೆಗಳು, ವೃತ್ತಿ ಬಗೆಗಿನ ಕಲ್ಪನೆಗಳು ಮತ್ತು ಆಹಾರ, ವಸತಿಗಳ ಬಗೆಗಿನ ಜೀವನ ದೃಷ್ಟಿಗಳನ್ನು ಕುರಿತ ಯಾವ ಚಿತ್ರಣಗಳನ್ನು ಲಿಖಿತ ಇತಿಹಾಸದಲ್ಲಿ ಕಟ್ಟಿಕೊಡಲಾಗಲಿಲ್ಲ. ಹಾಗೇನಾದರೂ ಶ್ರಮಿಕ ಸಮಾಜಗಳ ಬಗೆಗೆ ವಿರಳ ಮಾಹಿತಿಗಳಿದ್ದರೆ ಅವು ವೈಭವೋಪೇತ ಗತ ನಿರೂಪಣೆಯ ಕೇಂದ್ರವನ್ನು ವಿಜೃಂಭಿಸಲು ತಂದುಕೊಂಡ ಅಂಚಿನ ಚಿತ್ರಗಳು ಮಾತ್ರ.

ಹೀಗಾಗಿ ಪ್ರಕೃತಿಯೊಂದಿಗಿನ ಒಡನಾಟದ ಬದುಕಿನ ಸಾಮಾಜಿಕ, ಆರ್ಥಿಕ, ಅಧಿಕಾರದ ಸಂಬಂಧಾಂತರಗಳ ಯಾವ ಆಯಾಮವೂ ಚರಿತ್ರೆಯ ಕಥನದೊಳಗೆ ಪ್ರವೇಶಿಸಲಿಲ್ಲವೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ವರ್ತಮಾನದಲ್ಲಿ ನಿಂತು 'ಭೂತ'ದೊಳಗೆ ಹುದುಗಿರುವ ಸಾಮ್ರಾಜ್ಯಶಾಹಿ ಧೋರಣೆಯ ಕಥನಗಳಲ್ಲಿ ವರ್ಣರಂಜಿತವಾಗಿ ಮಂಡಿತಗೊಂಡ ವಿವರಗಳೆಂದರೆ ಕಿರೀಟ, ಖಡ್ಗ, ಛತ್ರಿ, ಚಾಮರಗಳು ಮತ್ತು ದೇವಸ್ಥಾನಗಳು, ಸ್ಮಾರಕಗಳು, ಹತಭಾಗ್ಯ ಸಾಮಾನ್ಯ ಸೈನಿಕನ ಅಸ್ಥಿಪಂಜರಗಳನ್ನು ಭೌತಿಕ ಆಧಾರಗಳೆಂಬ ಗುರುತುಗಳನ್ನಾಗಿ ಅವಲಂಬಿಸಿ ಆಳುವ ಪ್ರಭುಗಳ ವಿರಾಟ್ ಸದೃಶ್ಯ ಚರಿತ್ರೆಗಳನ್ನು ರೂಪಿಸಲಾಗಿದೆ. ಇಂಥ ಕಥಾನಕಗಳನ್ನು ಮಾತ್ರ ಜನತೆಯ ಪ್ರಜ್ಞೆಯಲ್ಲಿ ನೈಜ ಸಂಗತಿಗಳ ತಿಳವಳಿಕೆಯಾಗಿಸಿ ನಿಜ ಚರಿತ್ರೆಯಾಗಿ ಬಿಂಬಿಸುವ ಮತ್ತು ನಂಬಿಸುವ ವ್ಯವಸ್ಥಿತ ರಾಜಕಾರಣದ ಅಧಿಕಾರ ನಿರೂಪಣೆಗಳೇ ಆಗಿವೆ.

ಹೀಗಾಗಿ ಈ ಬಗೆಯ ಉದ್ದೇಶವನ್ನಿಟ್ಟುಕೊಂಡ ಒಳಾಶಯ ಬೇರೆಯದೇ ಆಗಿರುತ್ತದೆ. ಉಳ್ಳವರ ಹಿತರಕ್ಷಣೆಯ ಗುರಾಣಿಯಾಗಿ ನಿರ್ವಚಿಸುವ ಇತಿಹಾಸ ರಚನೆಯ ಕಥನಗಳಿಗೆ ವರ್ತಮಾನ ಹಾಗೂ ಭವಿಷ್ಯತ್‌ನಲ್ಲೂ ಪ್ರಭುತ್ವವೊಂದರ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಸುರಕ್ಷಿತ ಸುಖದ ವಲಯವನ್ನು ಸಂರಕ್ಷಿಸಿಟ್ಟುಕೊಳ್ಳುವ ರಾಜಕಾರಣವೇ ಹೌದು. ಉದಾಹರಣೆಗೆ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿಯ ಇಂದಿಗೂ ಇಂಗ್ಲೆಂಡಿನ ರಾಜಮನೆತನಕ್ಕೆ ಅಲ್ಲಿ ನೀಡುತ್ತಿರುವ ಗೌರವ ಮತ್ತು ಒದಗಿಸಲಾದ ಸ್ಥಾನಮಾನಗಳು, ಸವಲತ್ತುಗಳು ನಿರಾಯಾಸವಾಗಿ ಮುಂದುವರೆದಿರುವುದೇ ಇದಕ್ಕೆ ನಿದರ್ಶನವೆನಿಸಿದೆ. ಆದ್ದರಿಂದ ರಾಜ ಮತ್ತು ರಾಜಗುರುಗಳ ದರ್ಬಾರುಗಳು ಹಾಗೂ ಅಡ್ಡಪಲ್ಲಕ್ಕಿ ಉತ್ಸವಗಳು ಪ್ರಭುತ್ವ ವ್ಯವಸ್ಥೆಯ ಪ್ರಾಚೀನ ಪಳೆಯುಳಿಕೆಗಳ ಮುಂದುವರೆದ ಕುರುಹುಗಳಲ್ಲದೆ ಬೇರೆಯಲ್ಲ.

ಬದಲಾದ ಆಧುನಿಕ ಕಾಲದ ಇಂದಿಗೆ ಚರಿತ್ರೆಯ ಅರ್ಥ ಮತ್ತು ಅದರ ರೂಪ ಸ್ವರೂಪಗಳಿಗೆ ಹೊಸ ಅರ್ಥ ದೊರಕಿ ಅದು ಚಲನಶೀಲತೆಯನ್ನು ಪಡೆದುಕೊಳ್ಳುತ್ತಿರುವುದು ಆಶಾದಾಯಕವಾಗಿದೆ. ಹೆಗಲ್ ಮತ್ತು ಕಾರ್ಲ್‌ಮಾರ್ಕ್ಸ್‌ನಂಥ ವಿಶ್ವಮಾನ್ಯ ದಾರ್ಶನಿಕ ಚಿಂತಕರು ರೂಪಿಸಿದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ವಿಶ್ಲೇಷಣೆಗಳು ಇತಿಹಾಸವನ್ನು ವರ್ತಮಾನದ ವಿದ್ಯಮಾನಗಳಿಗೆ ಮುಖಾಮುಖಿಯಾಗಿಸಿ ವ್ಯವಸ್ಥೆಯಲ್ಲಿ ಸ್ಥಾವರಗೊಂಡ ಸಾಮ್ರಾಜ್ಯಶಾಹಿ ಮನೋಧರ್ಮಗಳನ್ನು ಮರುವ್ಯಾಖ್ಯಾನಿಸುವ ಪರಿಪಾಠ ಸಾಧ್ಯವಾಗಿದೆ. ಅಂಥ ತಿಳಿವಳಿಕೆಯು ಇತಿಹಾಸವನ್ನು ಬಹು ಬೌದ್ಧಿಕ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಶಿಸ್ತಿನಿಂದ ಸಮಾಜಮುಖಿಯೂ ಮತ್ತು ಜನಮುಖಿಯಾಗಿಸುವ ಪ್ರಯತ್ನಗಳು ನಡೆಯುತ್ತಿರುವುದು ಗಮನಾರ್ಹವಾದುದು.

**ಭಾರತದ ಚರಿತ್ರೆ ಮತ್ತು ಜನಸಮುದಾಯಗಳು**

ಭಾರತದ ಚರಿತ್ರೆ ಎಂದಿಗೂ ಅತ್ಯಂತ ಕುತೂಹಲದಾಯಕವಾದುದು. ಐದು ಸಾವಿರ ವರ್ಷಗಳ ಇತಿಹಾಸದಿಂದಲೂ 'ವರ್ಣ' ವ್ಯವಸ್ಥೆಯು ನೇಯ್ದ ಶೋಷಣೆಯ ಒಳಸೂತ್ರಗಳ ಮೂಲಕ ಅದರೆಲ್ಲ ಸಾಧ್ಯತೆಗಳಲ್ಲಿ ಪ್ರಯೋಗಿಸಿ ಫಲಪ್ರದವಾದ ಕಥನವೇ ಭಾರತದ ಚರಿತ್ರೆ. ಜಂಬೂದ್ವೀಪದ ಭರತಖಂಡ ಅಪಾರ ಸಂಪತ್ತಿನ ವೈವಿಧ್ಯ ಭೌಗೋಳಿಕ ಲಕ್ಷಣಗಳುಳ್ಳ ರಾಷ್ಟ್ರವಿದು. ಅಷ್ಟೆ ವೈವಿಧ್ಯ ಸಮಾಜ–ಸಂಸ್ಕೃತಿಗಳನ್ನು ಹೊಂದಿದ ಬಹುತ್ವದ ನೆಲೆಬೀಡು. ಜಾತಿ, ಮತ, ಪಂಥ, ವರ್ಗ, ಭಾಷೆ, ವೃತ್ತಿ, ಸಂಪ್ರದಾಯ... ಮುಂತಾದ ವಿಭಿನ್ನತೆ ಇಲ್ಲಿ ಹಾಸುಹೊಕ್ಕಾಗಿದೆ.

ಆದಿಮ ಕಾಲದಿಂದಲೂ ಆದಿವಾಸಿ, ಬುಡಕಟ್ಟು ಮತ್ತು ಅಲೆಮಾರಿಗಳಂಥ ಅನಾಥ ಸಮಾಜಗಳು, ನೂರಾರು ಹಿಂದುಳಿದ, ದಲಿತ ಮತ್ತು ಅಸ್ಪೃಶ್ಯ ಮುಂತಾದ ದುರ್ಬಲ ಸಮಾಜಗಳು, ಧಾರ್ಮಿಕ ಅಲ್ಪಸಂಖ್ಯಾಥ ಅಲಕ್ಷಿತ ಸಮಾಜಗಳು ಇಲ್ಲಿ ಶತಮಾನಗಳಿಂದ ನೆಲೆಸಿವೆ. ಇವು ತಮ್ಮ ಬಹುಭಾಷಿತ ಮೌಖಿಕ ಪರಂಪರೆಯ ಸಮೃದ್ಧ ಅವೈದಿಕ ಸಂಸ್ಕೃತಿಗಳಿಗೆ ಹೆಸರಾದರೂ ಕೂಡ, ತಮ್ಮ ಅನಕ್ಷರತೆ, ಅಜ್ಞಾನ ಬಡತನ ಹಸಿವು ಮತ್ತು ಮೌಢ್ಯ ಮುಂತಾದ ಅನ್ಯಾಯಗಳ ಪರಂಪರೆಯಲ್ಲಿ ಸೋತು ಶತಮಾನಗಳಿಂದ ಮೌನವಾಗಿವೆ. ಇಲ್ಲಿನ ಅಕ್ಷರ ಪರಂಪರೆಯ ಅಲ್ಪಸಂಖ್ಯಾತ ವೈದಿಕ ಪ್ರಣೀತ ಸಮಾಜಗಳೂ ಸೇರಿದಂತೆ ಬಹುತ್ವದ ನೆಲೆಯ ಸಂಕೀರ್ಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ದೃಷ್ಟಿಯ ಹಲವು ಆಯಾಮಗಳ ರಚನೆಯುಳ್ಳ ವ್ಯವಸ್ಥೆಯೊಂದು ಬಹುಕಾಲದಿಂದ ಇಲ್ಲಿ ನೆಲೆಸಿದೆ.

ಆದ್ದರಿಂದ ಈ ಅಖಂಡ ಭಾರತದ ನೆಲಮೂಲದ ಅವೈದಿಕ ಪರಂಪರೆಯ ಶ್ರಮ ಸಮಾಜಗಳ ಇಡೀ ಬದುಕನ್ನು ನಿಯಂತ್ರಿಸಿದ ಪ್ರಭುತ್ವಗಳು ಮತ್ತು ಈ ಆಳುವ ದೊರೆಗಳನ್ನಾದಿಯಾಗಿ ತಮ್ಮ ಹಿಡಿತಕ್ಕೆ ತೆಗೆದುಕೊಂಡು ಕೈಗೊಂಬೆಗಳನ್ನಾಗಿ ಮಾಡಿಕೊಂಡ ಪುರೋಹಿತಶಾಹಿ ವರ್ಗಗಳು ಪರಸ್ಪರ ಕೂಡಿ ನಡೆಸಿದ ವ್ಯವಸ್ಥಿತ ಪಿತೂರಿಗಳು ಅಸಮಾನತೆಯನ್ನು ಅನುಷ್ಠಾನಗೊಳಿಸಿ ನಡೆಸಲಾದ ಶೋಷಣೆಯ ಕಥನವೇ ಭಾರತದ ಇತಿಹಾಸವಾಗಿದೆ.

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಸ್ವಾತಂತ್ರ್ಯ ಪೂರ್ವದ ಪ್ರಾಚೀನ ಭಾರತದಲ್ಲಿ ಪ್ರತ್ಯೇಕವಾಗಿ ಐದುನೂರಕ್ಕೂ ಹೆಚ್ಚು ಪ್ರಭುತ್ವಗಳ ಹಾಗೂ ಸಾಮಂತ ಅರಸರ ಆಳ್ವಿಕೆಯಡಿಯಲ್ಲಿ ಸಂಸ್ಥಾನಗಳಾಗಿ ಹಂಚಿ ಹೋಗಿದ್ದ ಭೂಭಾಗವಿದು. ಹೀಗಿದ್ದರೂ ಏಕ ಪ್ರಕಾರವಾಗಿ ಅಖಂಡ ಭಾರತದ ಉದ್ದಗಲಕ್ಕೂ 'ವರ್ಣ' ವ್ಯವಸ್ಥೆಯ ಜಾತಿ ಪದ್ಧತಿಯ ಅಸಮಾನತೆಯು ಆ ಐನೂರಕ್ಕೂ ಹೆಚ್ಚು ಭೂ ಪ್ರಾಂತಗಳ ಗಡಿ-ಗೆರೆಯ ಸರಹದ್ದುಗಳನ್ನು ದಾಟಿಕೊಂಡು ಸರ್ವವ್ಯಾಪಿಯಾಗಿ ಹರಡಿಕೊಂಡಿದ್ದು ವಿಸ್ಮಯಕಾರಿಯಾದುದು. ಸಹಜವಾಗಿಯೇ ಆಕ್ರಮಣಕಾರಿ ನಿಲುವಿನ ವೈದಿಕ ಸಾಹಿತ್ಯದ ಧರ್ಮ ದೇವರು, ಸ್ವರ್ಗ, ನರಕ ಮತ್ತು ಪಾಪ ಪುಣ್ಯಗಳ ಹುಸಿ ಧಾರ್ಮಿಕ ನಂಬಿಕೆಗಳನ್ನು ಜನತೆಯಲ್ಲಿ ಪ್ರಬಲವಾಗಿ ಬಿತ್ತಿ ವರ್ತಮಾನದ ವಾಸ್ತವಗಳನ್ನು ಮರೆಮಾಚಲಾಯಿತು. ಎಂಥ ಆಳುವ ಬಲಿಷ್ಠ ಶಕ್ತಿಯ ಪೃಥ್ವಿವಲ್ಲಭರನ್ನು ಶಾಸ್ತ್ರ-ಪುರಾಣಗಳ ಹೆಸರಿನಲ್ಲಿ ನಿಯಂತ್ರಿಸಿ ಬಗ್ಗು-ಬಡಿಯುವ ಶಾಸ್ತ್ರ ವಿದ್ಯೆಯು ಇಲ್ಲಿನ ಕೆಳ ಸಮುದಾಯಗಳ ನೈಜ ಬದುಕಿನ ಚರಿತ್ರೆಯನ್ನು ಅಲ್ಲಗಳೆಯಿತು. ಅನಕ್ಷರಸ್ಥ ಸಮಾಜಗಳ ಬದುಕಿನ ಯಾವ ಎಳೆಯೂ ಚರಿತ್ರೆಯ ಪುಟಗಳಲ್ಲಿ ದಾಖಲಾಗಲಿಲ್ಲ. 'ಪಾಪ ಚರಿತ್ರೆಗಳನ್ನು ಬರೆಯುತ್ತದೆ, ಪುಣ್ಯ ಮೌನವಾಗಿರುತ್ತದೆ' ಎಂಬ ಗಯಟೆಯ ಮಾತು ಭಾರತದ ಚರಿತ್ರೆಯ ಸಂದರ್ಭದಲ್ಲಿ ನಿಜವೆನ್ನಿಸುತ್ತದೆ.

ಹೀಗೆ ವೇದ ಪುರಾಣಗಳ ಕರ್ಮಸಿದ್ಧಾಂತದ ಪಾತಳಿಯಲ್ಲಿ ರೂಪುಗೊಂಡ ವರ್ಣ ವರ್ಗ ಮತ್ತು ಜಾತಿಯೆಂಬ ಅಸಮಾನ ಸಮಾಜ ವ್ಯವಸ್ಥೆಯು ಪ್ರಭುತ್ವ ಮತ್ತು ಪುರೋಹಿತಶಾಹಿಯ ಪ್ರಬಲ ಹಿಡಿತವು ಭಾರತದ ಬಹುತ್ವದ ನೆಲೆಯ ಸಮುದಾಯಗಳ ಭಾಷೆ, ವೃತ್ತಿ, ಧರ್ಮ, ಸಾಹಿತ್ಯ ಕಲೆಗಳಿಗೆ ಬೆಲೆಯಿಲ್ಲದಂತೆ ಅಪವರ್ಗೀಕರಿಸಿ ಅಮಾನ್ಯ ಮಾಡಿತು. ಬಹುಸಂಸ್ಕೃತಿಗಳ ಚಲನಶೀಲ ಬದುಕಿನ ಇತಿಹಾಸ ಮತ್ತು ಪರಂಪರೆಗಳನ್ನು ಆಯಾ ಸಂಸ್ಕೃತಿಗಳ ನಿರ್ಮಾಪಕರೇ ಕೀಳರಿಮೆಯಲ್ಲಿ ತಿರಸ್ಕರಿಸುವಂಥ ಉಪಾಯಗಳನ್ನು ಹೂಡಿ ಅವಜ್ಞೆಗೆ ಈಡು ಮಾಡಿತು. ಈ ಮೂಲಕ ನೂರಾರು ಶ್ರಮಿಕ ಸಮಾಜಗಳ ಮೌಖಿಕ ಪರಂಪರೆಯ ನೆಲಮೂಲದ ಜ್ಞಾನ ಪರಂಪರೆಯನ್ನು ವ್ಯವಸ್ಥಿತವಾಗಿ ನಿರಾಕರಿಸಿತು. ಜ್ಞಾನ ಮಾರ್ಗದ ಚಾರ್ವಾಕ, ಬೌದ್ಧ, ಜೈನ, ನ್ಯಾಯ ವೈಶೇಷಕ, ಸಾಂಖ್ಯ ಮುಂತಾದ ಮತ-ಧರ್ಮ -ಪಂಥಗಳು ರೂಪಿಸಿದ ನಿಜ ಬದುಕಿನ ತಾತ್ವಿಕ ನೆಲೆಗಳನ್ನು ಸಮಾಜ-ಸಮುದಾಯಗಳಲ್ಲಿ ತರಲೆತ್ನಿಸಿದ ವೈಚಾರಿಕ ಜಾಗೃತಿ ಮತ್ತು ಸಹಬಾಳ್ವೆಯ ಮಾನವೀಯ ಬದುಕಿನ ತಿಳವಳಿಕೆಯನ್ನು ಬಲಪ್ರಯೋಗಗಳಲ್ಲಿ ಹತ್ತಿಕ್ಕಿತು. ಹಾಗೆಯೇ ಈ ನೆಲದಿಂದ ನೆಲೆಕಾಣದೆ ಪಲಾಯನ ಮಾಡುವಂತಹ ಕಠಿಣ ಪರಿಸ್ಥಿತಿಯನ್ನು ಪಟ್ಟಭದ್ರ ವ್ಯವಸ್ಥೆ ನಿರ್ಮಾಣ ಮಾಡಿತು. "ಮೌಢ್ಯತೆ, ಅಂಧಃಶ್ರದ್ಧೆ, ಯುದ್ಧಪರವಾದ ನಿಲುವುಗಳು, ವರ್ಣ, ವರ್ಗ ತರತಮಗಳೇ ಮೊದಲಾದ ಮಾನವ ಪ್ರೀತಿಯ ವಿರೋಧಿ


IJFANS International Journal of Food And Nutritional Sciences
Official Publication of International Association of Food and Nutrition Scientists

ಧೋರಣೆಯ ನಂಬಿಕೆಗಳನ್ನು ಧಿಕ್ಕರಿಸುವ ನೆಲೆಯಲ್ಲಿಯೇ ಜೈನ–ಬೌದ್ಧಗಳ ಹೊಸ ಮಾರ್ಗದ ರೂಪರೇಷೆಗಳಾದಾಗ ಬಹುಜನ ಆ ಕಡೆಗೆ ಒಲಿದದ್ದು ಸಹಜವೇ ಆಗಿತ್ತು. ಕಾಲ ಯಾವುದೇ ಇರಲಿ ಸಾಮಾನ್ಯರು ಎನ್ನುವ ಬಹು ಜನರು ಸಹಜವಾಗಿ ಬದುಕುವ ಬಗೆಯನ್ನು ಒಪ್ಪಿಕೊಳ್ಳುತ್ತಾರೆ, ಗೌರವಿಸುತ್ತಾರೆ. ಚರಿತ್ರೆಯುದ್ದಕ್ಕೂ ಅವರ ಒಲವು ಹೀಗೆ ಇದೆ. ಆದರೆ ಮರೆಮಾಚುವ ಪಿತೂರಿಗಳೇ ಇತಿಹಾಸವನ್ನು ಅಲಂಕರಿಸಿಕೊಂಡಿವೆ"[1] ಎಂಬ ಮಾತು ಭಾರತದ ಚರಿತ್ರೆಯಲ್ಲಿ ಬಹು ಸಂಸ್ಕೃತಿಯ ಸಮಾಜಗಳಿಗೆ ಆದ ಅನ್ಯಾಯವನ್ನು ಸರಿಯಾಗಿಯೇ ಗುರುತಿಸುತ್ತದೆ.

ಇಲ್ಲಿನ ತಳಜಾತಿ ಸಮಾಜ ಮತ್ತು ಸಮುದಾಯಗಳ ಜೀವಧ್ವನಿಗಳನ್ನು ನಾಶಮಾಡಿ ವೈದಿಕ ಪ್ರಣೀತ ವ್ಯವಸ್ಥೆಯ ಹುಸಿ ಮೌಲ್ಯಗಳನ್ನು ಧಾರ್ಮಿಕ ಹಾಗೂ ಪೌರಾಣಿಕ ಆಶಯಗಳೊಂದಿಗೆ ದೈವೀ ಆವರಣಗಳಲ್ಲಿ ದೊಡ್ಡದಾಗಿ ಬಿಂಬಿಸಿ ನಿರೂಪಿಸುವ ಎಲ್ಲ ಬಗೆಯ ಕಾರ್ಯಾಚರಣೆಗಳು ಇಲ್ಲಿ ನಡೆದಿವೆ. ಇತಿಹಾಸಕ್ಕೆ ಮೌಖಿಕ ಸಾಹಿತ್ಯವು ಆಕರ ಸಾಮಗ್ರಿಗಳಾಗುವುದಿಲ್ಲವೆಂಬ ಪಾಶ್ಚಾತ್ಯರ ದೃಷ್ಟಿ ಭಾರತದ ವೈದಿಕ ಪರಂಪರೆಗೆ ಇಲ್ಲಿನ ಸಮುದಾಯಗಳ ಇತಿಹಾಸವನ್ನು ಕಡೆಗಣಿಸುವುದಕ್ಕೆ ಭರಪೂರ ವರದಾನವೇ ಆಯಿತು.

ಹೀಗಾಗಿ ಒಂದು ಕಡೆ ಭಾರತದ ಆಳರಸರ ನೈಜ ಸಂಗತಿಗಳು ದೈವೀ ಆವರಣದ ಪುರಾಣೀಕೃತ ಧಾರ್ಮಿಕ ಭರಾಟೆಯ ಮಬ್ಬಿನಲ್ಲಿ ಮುಚ್ಚಿ ಹೋದವು. ಮತ್ತೊಂದೆಡೆ ಇತಿಹಾಸ ರಚನಾಶಾಸ್ತ್ರಕ್ಕೆ ಬಹುಸಂಸ್ಕೃತಿಯ ಮೌಖಿಕ ಪರಂಪರೆಗಳ ಬದುಕಿನ ನಿಜರೂಪಗಳು ಮೂಲ ಆಕರ ಸಾಮಗ್ರಿಗಳಾಗದೇ ಹೋದದ್ದು ಈ ದೇಶದ ನೈಜ ಬದುಕಿನ ಇತಿಹಾಸ ಪರಂಪರೆಯ ಅರಿವಿನ ಯಾವ ಪ್ರಮೇಯಗಳನ್ನು ಇತಿಹಾಸ ರಚನಾಶಾಸ್ತ್ರವು ದಕ್ಕಿಸಿಕೊಳ್ಳಲಾಗಲಿಲ್ಲವೆಂಬುದು ಈ ದೇಶದ ದುರಂತ ಚರಿತ್ರೆ.

ಆದ್ದರಿಂದ ಭಾರತದ ಚರಿತ್ರೆಯೆಂದರೆ ಕೇವಲ ಅರಮನೆಯ ಅಧಿಕಾರ ಸ್ಥಾನಗಳನ್ನು ಪಿತ್ರಾರ್ಜಿತ ಬಳುವಳಿಯಂತೆ ಪಡೆದ 'ಆಸ್ಥಾನ ವಿದ್ವಾನ್‌ಗಳು, ಕವಿವರ್ಯರು, ಕುಲಗುರುಗಳು ಹಾಗೂ ಪುರೋಹಿತ ವರ್ಗಗಳು'[2] ರೂಪಿಸಿಕೊಟ್ಟ ಅತಿರಂಜಿತ ಹೊಗಳಿಕೆಯ ದಾಖಲೆಗಳೇ ರಾಜಾಧಿರಾಜರ ಪರಾಕ್ರಮದ ಇತಿಹಾಸವೆನಿಸಿದೆ.

ಜೋಳದ ಪಾಟಿಗೆ ತಮ್ಮ ಪ್ರತಿಭೆ ಮತ್ತು ಪಾಂಡಿತ್ಯಗಳನ್ನು ತೆತ್ತುಕೊಂಡ ಕವಿಶ್ರೇಷ್ಠರು ರಚಿಸಿದ ಸಾಹಸಮಯ ರಾಜರ ಚರಿತ್ರೆಯ ಕಾವ್ಯಗಳೆಂದರೆ ಜೂಜು, ಮೋಜು, ಮೋಸ, ಯುದ್ಧ, ತಂತ್ರ–ಕುತಂತ್ರ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಮತ್ತು ವೈಭವಗಳು ಪೂರಕ ಆಕರಗಳಾದರೆ ಆಳುವ ದೊರೆಗಳ ಕೃಪೆಗೆ ಪಾತ್ರರಾಗಲು ವೀರ–ದಾನ ಶಾಸನಗಳನ್ನೂ ಮತ್ತು ಅವರ ವಿಲಾಸ–ವಿಭ್ರಮಗಳನ್ನು ಹೇಳುವ ಶೃಂಗಾರ ಸಾಮಗ್ರಿಗಳೇ ಭಾರತದ ಇತಿಹಾಸ ರಚನೆಗಿರುವ ಪ್ರಾಥಮಿಕ ಆಕರ ಸಾಮಗ್ರಿಗಳಾಗಿವೆ.

ಹೀಗಾಗಿ ನಿಜವಾಗಿಯೂ ಬಹುಸಂಖ್ಯಾತ ಜನ–ಸಮುದಾಯಗಳ ಬದುಕಿನ ಯಾವ ವಿವರಗಳೂ ನಮ್ಮ ಚರಿತ್ರೆಯಲ್ಲಿ ದೊರೆಯುವುದಿಲ್ಲ. ಸಮಾಜ–ಸಮುದಾಯಗಳ ಪ್ರಾಕೃತಿಕ ಜೀವನ ದ್ರವ್ಯಗಳು, ಅವರ ಆರ್ಥಿಕ ನೀತಿ, ನಿತ್ಯ ಬದುಕಿನ ತಾಂತ್ರಿಕ ಕೌಶಲಗಳು ಜನರ ಜೀವನದ ಗುಣಮಟ್ಟ, ನೀತಿ–ನಡಾವಳಿಗಳು, ಸಂಪ್ರದಾಯ–ಪದ್ಧತಿಗಳು, ವೃತ್ತಿ, ವ್ಯಾಪಾರ, ಜನರ ಸಾಧನೆ ಮುಂತಾದ ಸಮಾಜಗಳೊಳಗಿನ ಸಂಬಂಧಾಂತರಗಳು ಮತ್ತು ಈ ಎಲ್ಲಾ ಅನುಭವಗಳ ಹೂರಣವನ್ನು ನಮ್ಮ ಚರಿತ್ರೆಯು ಪ್ರಾಮಾಣಿಕವಾಗಿ ದಾಖಲಿಸಲಿಲ್ಲವೆಂಬುದು ಗಮನಾರ್ಹವಾದುದು. ವಿಚಿತ್ರವೆಂದರೆ ಮಾನವ ಕುಲದ ಹೆಜ್ಜೆ ಗುರುತುಗಳನ್ನು ಆದಿಮಾನವ ಕಾಲದಿಂದ ದಾಖಲಿಸುತ್ತ ಬಂದ ಇವರನ್ನು ಮತ್ತು ಇವರು ಉತ್ಪಾದಿಸಿದ ಭೌತಿಕ ಮತ್ತು ಮಾನಸಿಕವೆನಿಸಿದ ಯಾವ ವಿವರಗಳೂ ಇತಿಹಾಸವಾಗಲಿಲ್ಲ.

ಆದುದರಿಂದ ಪ್ರಾಚೀನ ಭಾರತದ ಚರಿತ್ರೆ ಎಂದರೆ ವಿಜಯಗಳ ದಾಖಲೆ ಮತ್ತು ಸೋಲಿನ ಮೌನವೇ ಆಗಿದೆ. ಪ್ರಜ್ಞಾಪೂರ್ವಕವಾಗಿ ಅಸಮಾನತೆಯನ್ನು ಅಂತರಂಗದಲ್ಲಿ ಒಪ್ಪಿಕೊಂಡಿರುವ ವ್ಯವಸ್ಥೆಯಲ್ಲಿ ದುಡಿಯುವ ಶ್ರಮ ಸಮಾಜಗಳನ್ನು ಬದುಕಿನ ಮುಖ್ಯವಾಹಿನಿಯ ಕೇಂದ್ರದಿಂದ ಅಂಚಿಗೆ ತಳ್ಳುವ ಇಲ್ಲವೆ ಹೊರಗಿಡುವ ವಿದ್ಯಮಾನಗಳು ಈ ಮೂಲಕ ರಾಜರೋಷವಾಗಿ ನಡೆಯುತ್ತವೆ.

ಅಂದರೆ ಈ ಬಗೆಯ ಜಾಣ್ಮೆಯ ನಡೆ ಬಹುಸಂಖ್ಯಾತ ದುಡಿಯುವ ಶ್ರಮ ಸಮಾಜಗಳೆಂಬ ಈ ಉತ್ಪಾದಕ ವರ್ಗಗಳನ್ನು ದುರ್ಬಲಗೊಳಿಸುವ ಪ್ರಕ್ರಿಯೆಯೇ ಆಗಿದೆ. ಜಾತಿ, ವೃತ್ತಿ, ಮತ ಮತ್ತು ಧರ್ಮಗಳ ಹೆಸರಿನಲ್ಲಿ ಶ್ರಮಿಕರನ್ನು ದಲಿತ, ಅಸ್ಪೃಶ್ಯರೆಂದು ನಾಮಕರಣ ಮಾಡಿ ಅಸಹಾಯಕಗೊಳಿಸಿ ಶೋಷಿಸುವ ನೀತಿ ಪದ್ಧತಿಗಳಲ್ಲಿ ನಮ್ಮ ದೇಶದ ಇತಿಹಾಸಕ್ಕೆ ಅಚ್ಚು–ಮೆಚ್ಚು. ಶೌಚ–ಚಾರಿತ್ರ್ಯ, ಮುಟ್ಟು–ಮಡಿ–ಮೈಲಿಗೆಗಳ ಹೆಸರಿನಲ್ಲಿ ಹೆಣ್ಣನ್ನು ದಾರುಣತೆಯಲ್ಲಿಟ್ಟ ಪರಂಪರೆ ನಮ್ಮದು. ಹೆಣ್ಣಿನ ನೈಸರ್ಗಿಕ ಮತ್ತು ಜೈವಿಕ ಸೃಷ್ಟಿಶೀಲ ಧಾರಣ ಶಕ್ತಿಯನ್ನೇ ಅಲ್ಲಗಳೆದು ಅವಮಾನಿಸಿ ಕೇವಲ ಭೋಗದ ವಸ್ತುವನ್ನಾಗಿ ಪರಿಭಾವಿಸಿದ ವಿಕೃತ ವ್ಯವಸ್ಥೆಯು ಇಲ್ಲಿನ ಕಥಾನಕಗಳಲ್ಲಿ ಯಥೇಚ್ಛವಾಗಿ ದೊರೆಯುತ್ತದೆ. ಆದ್ದರಿಂದ ಐತಿಹಾಸಿಕ ಕಥನಗೀತೆಗಳಲ್ಲಿ ದಾಖಲುಗೊಂಡ ವ್ಯವಸ್ಥೆಯ ಬಗೆಗಿನ ವಿವರಗಳು ಮತ್ತು ಅದಕ್ಕೆ ಪರ ಹಾಗೂ ವಿರೋಧಗಳಿಗೆ ಜನಪದ ಮನಸ್ಸು ಪಡಿಮಿಡಿದ ರೀತಿ ಗಮನಾರ್ಹವೆನಿಸುತ್ತದೆ.

Research Paper © 2012 IJFANS. All Rights Reserved, 

ಒಟ್ಟಾರೆ ಭಾರತದ ಶಿಷ್ಟ ಚರಿತ್ರೆಯ ದೃಷ್ಟಿ–ಧೋರಣೆಗಳನ್ನು ಕುರಿತು ಹೀಗೆ ಸಂಗ್ರಹಿಸಬಹುದು "ಮೊದಲನೆಯದಾಗಿ ಜೀವನ ಚರಿತ್ರೆಗಳ ವೈಭವೀಕರಣ ಇದರ ಮುಖ್ಯ ಲಕ್ಷಣವಾಗಿದೆ. ಚರಿತ್ರೆಯ ರಚನಾ ವಿನ್ಯಾಸದ ದೃಷ್ಟಿಯಿಂದ ಅವುಗಳಲ್ಲಿ ಅನೇಕ ಮಿತಿಗಳಿವೆ. ವಂಶಾವಳಿಯ ಕಥನಗಳಲ್ಲಿ ವೈಭವೀಕರಣವೂ ಒಂದು ಪ್ರಧಾನವಾದ ಅಂಶವಾಗಿದೆ. ತಮ್ಮ ಆಶ್ರಯದಾತರ ದಿಗ್ವಿಜಯಗಳು, ಖಾಸಗಿ ಬದುಕು, ರಾಜವೈಭವ ಮುಂತಾದ ಅಂಶಗಳ ಸುತ್ತಲೇ ಈ ಬರಹಗಳು ಕೇಂದ್ರೀಕರಿಸುತ್ತವೆ. ಎರಡನೆಯದಾಗಿ, ಕಾಲಗಣನಾಶಾಸ್ತ್ರದಲ್ಲಿ ಅವುಗಳಿಗೆ ಆದ್ಯತೆಯಿಲ್ಲ. ಏಕೆಂದರೆ ಈ ಲೇಖಕರು ಚರಿತ್ರೆ ಬರವಣಿಗೆಯಲ್ಲಿ ಘಟನೆಗಳ ವ್ಯಕ್ತಿಗಳ ಬಗೆಗಿನ ನಿಜವನ್ನು ಕಟ್ಟಿಕೊಡಬೇಕೆಂದು ಬಯಸಿದವರಲ್ಲ. ಕಾಲಾತೀತ ದೃಷ್ಟಿಕೋನ, ಯುಗಕಲ್ಪನೆಗಳೂ ಇಲ್ಲಿ ಪ್ರಮುಖವಾಗಿ ಹರಿದಾಡುತ್ತವೆ. ಇದರಿಂದ ಇವುಗಳಿಗೆ ಗಂಭೀರ ಮಿತಿಗಳು ಉಂಟಾಗಿವೆ. ಮೂರನೆಯದಾಗಿ, ಭೂತಕಾಲವನ್ನು ಪುರಾಣೀಕರಿಸುವುದು ಈ ಬರಹಗಳಲ್ಲಿ ಹಾಸುಹೊಕ್ಕಾಗಿದೆ. ವೈಭವೀಕರಣದ ಭಾಗವಾಗಿ ಕಟ್ಟುಕತೆಗಳು ಹೇರಳವಾಗಿ ನುಸುಳಿವೆ. ಕರ್ಮಸಿದ್ಧಾಂತ, ಪುನರ್‌ಜನ್ಮದ ನಂಬಿಕೆಗಳು, ಮಾನವರ ಬದುಕನ್ನು ದೈವವೇ ನಿರ್ಧರಿಸುತ್ತದೆ ಎಂಬ ಕಲ್ಪನೆ ಮೊದಲಾದವು ಒಟ್ಟು ಬರವಣಿಗೆಯನ್ನು ನಿಯಂತ್ರಿಸಿವೆ"[೩] ಎಂಬ ಮಾತುಗಳು ಭಾರತದ ಲಿಖಿತ ಇತಿಹಾಸದಲ್ಲಿ ದಾಖಲಾದ ಪರಿಮಿತಿಗಳನ್ನು ಸ್ಪಷ್ಟವಾಗಿ ಗುರುತಿಸುತ್ತವೆ.

**ಚರಿತ್ರೆ – ಜನಲೋಕದ ಗ್ರಹಿಕೆಗಳು**

ಮಾನವ ಕುಲದ ಇತಿಹಾಸದಲ್ಲಿ ಅನಕ್ಷರಸ್ಥ ಜನಸಮುದಾಯಗಳ ದೃಷ್ಟಿಯಲ್ಲಿ 'ಚರಿತ್ರೆ'ಯ ಬಗೆಗಿನ ಗ್ರಹಿಕೆಗಳು ಶಿಷ್ಟ ಇತಿಹಾಸದ ಕಲ್ಪನೆ ಮತ್ತು ತಿಳಿವಳಿಕೆಗಿಂತ ಭಿನ್ನವಾಗಿವೆ. ಆದಿಮಾನವನ ಕಾಲದಿಂದಲೂ ನಿಸರ್ಗ ಸಹಜ ಬದುಕಿನೊಂದಿಗೆ ಜೊತೆಗೂಡಿ ಬಂದ ಎಲ್ಲ ಬಗೆಯ ಸಂಬಂಧಗಳ ಸಮಗ್ರ ಚಿತ್ರಣಗಳೆಲ್ಲವೂ ಇತಿಹಾಸವೇ ಆಗುತ್ತದೆ. ಜನಪದ ಸಮುದಾಯಗಳು ತನ್ನ ಜೀವಿತದ ಎಲ್ಲ ಅನುಭವಗಳ ಅರಿವಿನ ವಿಕಾಸವನ್ನು ಸಮಷ್ಟಿ ಪ್ರಜ್ಞೆಯಲ್ಲಿ, ಮೌಖಿಕ ಪರಂಪರೆಯಲ್ಲಿಯೇ ನಿರೂಪಿಸುತ್ತವೆ. ಯಾವುದೇ ಜನಪದಗಳು ತಮ್ಮ ಬದುಕು ಮತ್ತು ಬವಣೆಗಳನ್ನು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಹೊತ್ತು ತಂದು ಪುನರ್‌ಸೃಷ್ಟಿಗೊಳಿಸುತ್ತದೆ. ಇದು ಪ್ರಾಚೀನ ಕಾಲದಿಂದಲೂ ಒಂದು ಪ್ರಕ್ರಿಯೆಯಾಗಿ ಸಾಗಿ ಬಂದಿರುತ್ತದೆ. ಈ ಬಗೆಯ ಜನಪದಗಳ ಚಲನೆಯಲ್ಲಿ ಖಚಿತವಾಗಿಯೂ ಒಂದು ವಿಶಿಷ್ಟ ಜೀವನ ಕ್ರಮ ಎದ್ದುಕಾಣುತ್ತದೆ. ಯಾವುದೇ ಬಾಹ್ಯ ಒತ್ತಡಗಳಿಗೆ ಮುಕ್ತವಾಗಿ ತೆರೆದುಕೊಂಡರೂ ಆಕರ್ಷಣೆ ಮತ್ತು ವಿಕರ್ಷಣೆಗೆ ಪಕ್ಕಾಗುತ್ತಾ ತನ್ನ ಪರಂಪರೆಯ ಮೂಲಾಶಯಗಳಕೊಂಡಿ ಕಳಚದಂತೆ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ತನ್ನ ನೆಲದ ಜ್ಞಾನಮೀಮಾಂಸೆಯ ಸ್ವರೂಪಗಳನ್ನು ಜತನವಾಗಿ ಕಾಪಾಡಿಕೊಂಡಿರುತ್ತದೆ. ಈ ವಿಶೇಷ ಅನನ್ಯತೆಯ ಚಹರೆಗಳು ಅವರ "ಭಾಷಿಕ, ಸಾಹಿತ್ಯಿಕ, ಕ್ರಿಯಾತ್ಮಕ ಮತ್ತು ವೈಜ್ಞಾನಿಕ"[೪] ಅಭಿವ್ಯಕ್ತಿ ರಚನೆಗಳಲ್ಲಿ ಅಂತಸ್ಥವಾಗಿರುತ್ತದೆ. ಇಂತಹ ಬಾಯ್ದೆರೆಯ ಬಹುಸಂಖ್ಯಾತ ಜನಸಮುದಾಯಗಳ ಸಮೃದ್ಧ ಸಂಸ್ಕೃತಿಯ ಪುನರ್‌ಸೃಷ್ಟಿ ಕ್ರಿಯೆಯಲ್ಲಿ ತನ್ನ ಪರಂಪರೆಯ ಆಕೃತಿಗಳನ್ನು ನಿರೂಪಿಸುತ್ತದೆ. ಈ ನಿರೂಪಣೆಗಳಲ್ಲಿ ಅದು ಕಾಲತ್ರಯಗಳನ್ನು ವರ್ತಮಾನಕ್ಕೆ ತಂದು ಜೀವಂತಗೊಳಿಸುವುದು ಮೌಖಿಕ ಇತಿಹಾಸದ ಬಹುಮುಖ್ಯ ಶಕ್ತಿ. ಮಾತ್ರವಲ್ಲ ಕಾಲದ ಹಂಗನ್ನು ಹರಿದುಕೊಂಡೂ ಕಾಲಾತೀತ ಪ್ರಜ್ಞೆಯಲ್ಲಿ ವರ್ತಿಸುವುದು ಅದರ ಮತ್ತೊಂದು ವಿಶಿಷ್ಟ ಗುಣ.

ಇಂತಹ ಬಾಯ್ದೆರೆಯ ಬಹುಸಂಖ್ಯಾತ ಜನಸಂಸ್ಕೃತಿಯ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನು ಲಿಖಿತ ಪರಂಪರೆಯ ಇತಿಹಾಸ ತನ್ನ ಒಳಕ್ಕೆ ಬರಮಾಡಿಕೊಳ್ಳಲಿಲ್ಲ. ಆದರೆ ಗಮನಿಸಬೇಕಾದುದೆಂದರೆ ಮೌಖಿಕ ಪರಂಪರೆಯು ಲಿಖಿತ ಇತಿಹಾಸವನ್ನು ಬಹಳ ಅರ್ಥಪೂರ್ಣವಾಗಿ ಮುಖಾ–ಮುಖಿಯಾದುದು ಮತ್ತು ಶಿಷ್ಟವನ್ನು ಒಳಗೊಂಡು ಸಮಗ್ರತೆಯಲ್ಲಿ ನಿರೂಪಿಸುವುದು.

ಶತಮಾನಗಳಿಂದ ಚರಿತ್ರೆಯ ಹೊರಗಿದ್ದವರೇ ಲಿಖಿತ ಪರಂಪರೆಯ ರಾಮಾಯಣ, ಮಹಾಭಾರತ, ಪುರಾಣಗಳು ಹಾಗೂ ಪ್ರಭುತ್ವ ಪರಂಪರೆಯ ಇತಿಹಾಸದ ಆಳರಸರನ್ನು ತಮ್ಮೊಳಗೆ ಬರಮಾಡಿಕೊಂಡು ತಮ್ಮ ಬದುಕಿನ ಆವರಣಗಳಿಗೆ ಒಗ್ಗಿಸಿಕೊಂಡು ಮೌಖಿಕ ಸಾಹಿತ್ಯದ ಪುರಾಣೇತಿಹಾಸ ಐತಿಹ್ಯಗಳ ಮೂಲಕ ಮಾನಸಿಕ ಪಠ್ಯಗಳಲ್ಲಿ ಕಥನವಾಗಿಸಿರುವುದು ಬಹುಮುಖ್ಯ ಸಂಗತಿ. "ಇಂತಹ ಸ್ಥಿತಿಯಲ್ಲಿ ಮೌಖಿಕ ಇತಿಹಾಸವು ಸಾಮಾಜಿಕ ಸಂಬಂಧವನ್ನು ಪುರಾಣವಾಗಿಸುವ ಹಾಗೂ ಗತಕಾಲವನ್ನು ಸಮಕಾಲೀನಗೊಳಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಇದು ಬಹಳ ವಿಶೇಷವಾದ ಸಂಗತಿ. ಚರಿತ್ರೆ ಎಂದರೆ ಗತಕಾಲದ ಪಾಠ ಎಂದು ಭಾವಿಸುವುದನ್ನು ಮೌಖಿಕ ನಿರೂಪಣೆಗಳು ಅಲ್ಲಗಳೆಯುತ್ತವೆ. ಚರಿತ್ರೆ ಇರುವುದು ಗತಕಾಲದಲ್ಲಲ್ಲ. ಇತಿಹಾಸವು ನಿರೂಪಿತವಾಗುವುದು ವರ್ತಮಾನದ ಗ್ರಹಿಕೆಯಿಂದಲೇ ಮತ್ತು ನಾವು ಬದುಕಿರುವ ಕಾಲದ ಒತ್ತಡಗಳಿಂದಲೇ ಎಂಬುದನ್ನು ಮೌಖಿಕ ಇತಿಹಾಸವು ಧ್ವನಿಸುತ್ತದೆ"[೫] ಎಂಬ ಮಾತು ಮೌಖಿಕ ಇತಿಹಾಸದ ಸ್ವರೂಪ, ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸುತ್ತದೆ.

ಕಾಲಕ್ಕೆ ಬದ್ಧವಾದ ಲಿಖಿತ ಪರಂಪರೆಯ ಪ್ರಭುತ್ವ ಕೇಂದ್ರಿತ ಚಿಂತನೆಗಿಂತ ಭಿನ್ನವಾಗಿ ಜನಕೇಂದ್ರಿತ ಬಾಳುವ ಚಿಂತನೆಗಳು ರಮ್ಯತೆಯಲ್ಲಿ ಮಾಂತ್ರಿಕ ರೂಪಗಳ ಮಾರುವೇಷಗಳಲ್ಲಿ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಮೈದಳೆಯುತ್ತವೆ. ಎಷ್ಟೋ ಸಲ ಶಿಷ್ಟ ಮತ್ತು ಜನಪದಗಳೆರಡೂ ಪರಸ್ಪರ ಕೊಳ್ಳು ಕೊಡುವ ನೆಲೆಯಲ್ಲಿ ಇತಿಹಾಸವನ್ನು ಗ್ರಹಿಸುವುದೂ ಇದೆ. "ಜನಪದೀಯ ಅಂಶಗಳಿಗೆ ಶಾಸ್ತ್ರೀಯ ಚೌಕಟ್ಟು ದೊರೆತು ಶಿಷ್ಟವಾಗುವ, ಶಿಷ್ಟವಾದ ವಿಚಾರಗಳನ್ನು ಜನಪದರು ಸ್ವೀಕರಿಸಿ ಜನಪದೀಯವಾಗಿಸುವ ಕ್ರಿಯೆ ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ."[೬] ಇಂತಹ ಸಂದರ್ಭಗಳಲ್ಲಿ ಸಮಕಾಲೀನ ಚಾರಿತ್ರಿಕ ಸಂಗತಿಗಳು ಮೌಖಿಕ ಪರಂಪರೆಯ ಕಥನಗಳಲ್ಲಿ ಕಾಲಬದ್ಧ ಸೂಚನೆಗಳನ್ನು ನೀಡುವುದೂ ಇರುತ್ತದೆ. ಇದು ಸಮುದಾಯಗಳ ಗ್ರಹಿಕೆ ಮತ್ತು ಪ್ರತಿಕ್ರಿಯೆಗಳ ಇಂಥ ಕಥನಗಳಲ್ಲಿ ಜನಪದ ಇತಿಹಾಸ ಪ್ರಜ್ಞೆ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಒಳಗೊಳ್ಳುವ ಬಹು ಆಯಾಮಗಳಲ್ಲಿ ನಡೆಯುತ್ತಿರುತ್ತದೆ. ಆದ್ದರಿಂದ "ಜನಪದರು ಇತಿಹಾಸವನ್ನ ಆಚರಿಸುತ್ತಾರೆಯೇ ವಿನಃ ಅದನ್ನ ಮೃತ ಸ್ಥಿತಿಯಲ್ಲಿ ದಾಖಲಿಸುವುದಿಲ್ಲ. ಇದು ಚರಿತ್ರೆಯ ಚಲನಶೀಲತೆಯನ್ನು ತೋರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ, ಬದುಕಿನ ಚಲನಶೀಲ ಅಭಿವ್ಯಕ್ತಿಯೇ ಮೌಖಿಕ ಇತಿಹಾಸ ಎಂದಾಗುತ್ತದೆ"[೭] ಎಂಬ ಮಾತು ಅರ್ಥಪೂರ್ಣವೆನಿಸುತ್ತದೆ.

ಆದ್ದರಿಂದ ಜನಪದ ಪರಂಪರೆಯು ಯಜಮಾನಿಕೆಯನ್ನು ನಿರಾಕರಿಸುವ ಬಗೆಯೇ ವಿಶಿಷ್ಟವಾದುದು. ಕಾಲದ ವಿದ್ಯಮಾನಗಳನ್ನು ಪುರಾಣ–ಐತಿಹ್ಯಗಳನ್ನಾಗಿ ಮಾಡಿಕೊಳ್ಳುತ್ತಲೇ ವರ್ತಮಾನಕ್ಕೆ ಅವುಗಳನ್ನು ಮುರಿದು ಕಟ್ಟುತ್ತದೆ. ಕಿತ್ತೂರು ರಾಣಿಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಹಲಗಲಿಯ ಬೇಡರು ಅಲ್ಲದೆ ಮಹಾಸತಿ ಮತ್ತು ಸ್ತ್ರೀ ಬಲಿದಾನದಂಥ ಸಂಪ್ರದಾಯಗಳ ಅನೇಕ ಕಥನಗಳನ್ನು ಈ ನೆಲೆಯಲ್ಲಿ ಗಮನಿಸಬಹುದು. ಪುರಾಣಗಳಲ್ಲಿ ಹೇಳಲಾಗುವ ಸಂಗತಿಗಳು ಸ್ಥಳ ಮತ್ತು ಘಟನೆಗಳು ಒಮ್ಮೊಮ್ಮೆ ಜನಪದರ ಐತಿಹ್ಯಗಳಾಗಿ ಇತಿಹಾಸವಾಗಿ ಮಾರ್ಪಾಟಾಗುತ್ತವೆ. ತಾವು ನಿರೂಪಿಸುವ ಸಂಗತಿಗಳನ್ನು ದೃಢಪಡಿಸುವುದಕ್ಕೆ ದಾಖಲೆಗಳಾಗಿ ಗುಡ್ಡ–ಬೆಟ್ಟ, ಕೆರೆ–ಕೊಳ್ಳ, ನದಿ, ಪ್ರಾಣಿ, ಪಕ್ಷಿ, ಗಿಡ ಮರಗಳನ್ನು ತಮ್ಮ ವಿಶಿಷ್ಟ ಕಥಾನಕಗಳಲ್ಲಿ ಸಂವಾದಿಸುತ್ತಾರೆ. ಹೀಗೆ ಒಂದು ನಿರ್ದಿಷ್ಟ ಭೌತಿಕ ಆಧಾರಗಳಿಂದ ಭೂತವನ್ನು ವರ್ತಮಾನದಲ್ಲಿ ಪುನರ್ ಸೃಷ್ಟಿಸುತ್ತಾರೆ.

ಹೀಗಾಗಿ "ಸಮಾಜದಲ್ಲಿ ತಾವು ಅನುಭವಿಸುವ ದೈನಂದಿನ ಸುಖ ದುಃಖಗಳನ್ನೆಲ್ಲ ಬೇರೆ ಬೇರೆ ಪಾತ್ರಗಳಲ್ಲಿ, ಘಟನೆಗಳಲ್ಲಿ, ಹಳೆಯ ಕಥನಗಳಲ್ಲಿ, ಆಚರಣೆಗಳಲ್ಲಿ ಜನಪದರು ಪ್ರತಿಸೃಷ್ಟಿಸಿಕೊಳ್ಳುವುದು ಸಾಮಾನ್ಯ ಸಂಗತಿ. ಹೀಗೆ ಖಾಸಗಿ ಬದುಕಿನ ಎಲ್ಲ ಸೋಲು–ಗೆಲುವು, ಆಸೆ–ನಿರಾಸೆ, ಕನಸು–



IJFANS International Journal of Food And Nutritional Sciences Official Publication of International Association of Food and Nutrition Scientists

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಆಶಯಗಳನ್ನೆಲ್ಲ ಸಾರ್ವಜನಿಕವಾಗಿ ಹಾಡಿಕೊಳ್ಳುತ್ತಲೇ ಜನಪದ ಪುರಾಣ–ಐತಿಹ್ಯ–ಆಚರಣೆಗಳ ಪರಕಾಯ ಪ್ರವೇಶ ಮಾಡಿ ತಮ್ಮ ಒಡಲ ಕಿಚ್ಚನ್ನು ಪರಿಹರಿಸಿಕೊಳ್ಳುತ್ತಾರೆ."[೮]

ಈ ದೃಷ್ಟಿಯಿಂದ ಕನ್ನಡ ಜನಪದ ಕಥನಗೀತೆಗಳ ಪರಂಪರೆ ಲಿಂಗ ಅಸಮಾನತೆಯ ವ್ಯವಸ್ಥೆಯ ವಿರಾಟ್ ಸ್ವರೂಪಗಳ ಸಂವೇದನೆಗಳನ್ನು ಅದ್ಭುತವಾಗಿ ನಿರೂಪಿಸುತ್ತವೆ. "ಆದ್ದರಿಂದಲೇ ಮೌಖಿಕ ಚರಿತ್ರೆ ಎಂದರೆ ಸುಮ್ಮನೆ ಐತಿಹ್ಯ–ಲಾವಣಿ, ವೀರಗೀತೆ ಹಾಗೂ ವೀರಕಾವ್ಯಗಳ ಸಂಗ್ರಹ ಮಾತ್ರ ಅಲ್ಲ. ಮೌಖಿಕ ವಿವರಗಳ ಹೊರಮೈಯಲ್ಲಿರುವುದು ನಿಜವಾದ ಇತಿಹಾಸವಲ್ಲ. ಏಕಕಾಲಕ್ಕೆ ಮೌಖಿಕ ಕಥನಗಳು ಎರಡು ಬಗೆಯ ಇತಿಹಾಸವನ್ನು ನುಡಿಸುತ್ತಿರುತ್ತವೆ. ಮೇಲು ಮಟ್ಟದಲ್ಲಿ ತನ್ನದಲ್ಲದ ಅಲಂಕಾರಗಳನ್ನು ಮೌಖಿಕ ಕಥನಗಳು ಧರಿಸಿಕೊಂಡಿದ್ದರೆ, ಒಳಮೈಯಲ್ಲಿ ಮಾತ್ರ ತಮ್ಮದೇ ಪ್ರತಿಬಿಂಬವನ್ನು ವ್ಯಕ್ತಪಡಿಸುವ ಕುರುಹನ್ನು ಬಿತ್ತುತ್ತವೆ. ಸರಳವಾಗಿ ಹೇಳುವುದಾದರೆ, ಹೊರಮೈಯಲ್ಲಿ ವ್ಯವಸ್ಥೆಯ ಪರವಾದ ಇತಿಹಾಸವನ್ನು ವೈಭವೀಕರಿಸಿ ಒಪ್ಪಿ ಅದನ್ನು ಅಭಿನಯಿಸುವುದು ಒಂದು ಕಡೆಗಿದ್ದರೆ ಅದಕ್ಕೆ ವಿರುದ್ಧವಾಗಿ ಒಳಮೈಯಲ್ಲಿ ತಾನು ಹಾಡುವುದರ ವಿರುದ್ಧವಾಗಿಯೇ ಮೌನವಾಗಿ ರಮ್ಯ ಆಕ್ರಂದನದಲ್ಲಿ ದುರಂತ ಪ್ರಜ್ಞೆಯನ್ನು ವ್ಯಕ್ತಪಡಿಸುವ ಗುಣ ಮತ್ತೊಂದು ಕಡೆಗಿದೆ. ಇಂತಹ ವೈರುಧ್ಯದ ಚಾರಿತ್ರಿಕತೆಯು ಹೆಚ್ಚಾಗಿ ಮಹಿಳೆಯರ ಕಥನಗೀತೆಗಳಲ್ಲಿ ದಟ್ಟವಾಗಿ ಕಾಣಸಿಗುತ್ತದೆ."[೯] ಹೀಗೆ ತನ್ನ ಸಾಮಾಜಿಕ ಇತಿಹಾಸದಲ್ಲಿ ಜನಪದ ಸಮುದಾಯಗಳು ಯಜಮಾನಿಕೆಯ ನಿರಾಕರಣೆಯಲ್ಲಿ ಮತ್ತು ಬಹುಸಂಸ್ಕೃತಿಯ ವಿನ್ಯಾಸಗಳನ್ನು ಧಾರಣೆ ಮಾಡುತ್ತಲೇ ಕಾಲದ ಎಲ್ಲ ಗತಿಗಳನ್ನು ಮೀರುವ ತುಡಿತಗಳನ್ನು ಹೊಂದಿರುತ್ತವೆಂಬುದನ್ನು ಗಮನಿಸಬೇಕು. ಇಂಥ ಸಮೃದ್ಧ ಬದುಕಿನ ಮೂಲ ಅಂತಸ್ಸತ್ವವನ್ನು ಹೊತ್ತುತರುವ ಜಾನಪದವು ರಾಷ್ಟ್ರೀಯ ಬದುಕಿನ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಜನಪದ ಸಮಾಜವೊಂದರ ಭಾಷೆ, ವೃತ್ತಿ, ಧರ್ಮ, ನಂಬಿಕೆ, ಸಂಪ್ರದಾಯ, ವಿವಾಹ, ಹುಟ್ಟು–ಸಾವು, ವಿಧಿ–ನಿಷೇಧ, ಉಡುಗೆ–ತೊಡುಗೆ, ಹಬ್ಬ, ಜಾತ್ರೆ... ಮುಂತಾದ ನೂರಾರು ಸಂಗತಿಗಳು ಮಾನವ ಕುಲದ ವೈಶಿಷ್ಟ್ಯಪೂರ್ಣ ಸಂಸ್ಕೃತಿಯ ಕಥನಗಳೂ ಕೂಡ ಒಂದೊಂದು ಜನಾಂಗದ ಜೀವಾಳದ ಇತಿಹಾಸವೇ ಆಗಿರುತ್ತದೆ. ಆಗ ಈ ಮೌಖಿಕ ಪರಂಪರೆಯ ಸಮಾಜಗಳ ಜೀವನ ವ್ಯಾಪಾರವೂ ಈ ಭೂಮಿಯ ಮೇಲಿನ ಮಾನವನ ಬದುಕಿನ ಇತಿಹಾಸವೇ ಎಂಬ ಗ್ರಹಿಕೆ ಇತಿಹಾಸ ರಚನಾ ಶಾಸ್ತ್ರದ ತಿಳಿವಳಿಕೆಯಾಗಿ ಮುಂಚೂಣಿಗೆ ಬರುತ್ತದೆ. ಆಗ ಮಾತ್ರ ಇತಿಹಾಸಕ್ಕೆ ಒಂದು ಸಮಗ್ರತೆ ದೊರಕಿದಂತಾಗುತ್ತದೆ.



IJFANS International Journal of Food And Nutritional Sciences Official Publication of International Association of Food and Nutrition Scientists

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

**ಕೊನೆಟಿಪ್ಪಣಿಗಳು**

೧. ಪ್ರಶಾಂತನಾಯಕ ಜಿ. : ಬದುಕು ಭಾವಗೀತೆ ಅಂಕಣ ಬರಹ, ಟೈಮ್ಸ್ ಆಫ್ ಧೀನಬಂಧು, ಕನ್ನಡ ಮಾಸ ಪತ್ರಿಕೆ, ಜುಲೈ ೨೦೧೫, ಸಂಪುಟ – ೪, ಸಂಚಿಕೆ ೧೦, ಪುಟ–೨.

೨. ಈ ವೃತ್ತಿಯವರೆಲ್ಲರೂ ಒಂದೇ ಜಾತಿ ಸಮಾಜಕ್ಕೆ ಸೇರಿದವರಾಗಿರುತ್ತಿದ್ದರೆಂಬುದು ಸರ್ವವಿಧಿತ.

೩. ವಿಜಯ್‌ಪೂಣಚ್ಚ ತಂಬಂಡ (ಸಂ) : ಚರಿತ್ರೆಯ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಚರಿತ್ರೆ ಸಂಪುಟ ೧, ಅಶ್ವತ್ಥನಾರಾಯಣ (ಲೇ) ಅಮೂರ್ತದಿಂದ ಮೂರ್ತದೆಡೆಗೆ – ಆರಂಭಿಕ ಚರಿತ್ರೆ ಲೇಖನ ಪರಂಪರೆಗಳೊಂದಿಗೆ ಅನುಸಂಧಾನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦, ಪುಟ ೬೨

೪. ಆರ್.ಎಸ್. ಬಾಗ್ಸ್ ನಿರೂಪಿಸಿದ ಜಾನಪದದ ಸ್ಥೂಲ ವರ್ಗೀಕರಣಗಳು.

೫. ವಿಜಯ್‌ಪೂಣಚ್ಚ ತಂಬಂಡ (ಸಂ) : ಚರಿತ್ರೆಯ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಚರಿತ್ರೆ ಸಂಪುಟ ೧, ಮೊಗಳ್ಳಿ ಗಣೇಶ್ (ಲೇ), ಮೌಖಿಕ ಇತಿಹಾಸದ ತಾತ್ವಿಕನೆಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦, ಪುಟ ೩೨೪.

೬. –ಅದೇ– ಪುಟ ೩೨೦

೭. –ಅದೇ– ಪುಟ ೩೨೬

೮. –ಅದೇ– ಪುಟ ೩೨೮

೯. –ಅದೇ– ಪುಟ ೩೩೧